ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ : ಇಡಿ/ಕೆಇಎ/ಆಡಳಿತ/ಸಿ.ಆರ್.19/2021 ದಿನಾಂಕ: 09.01.2022

## ಪ್ರಕಟಣೆ

ಸರ್ಕಾರದ ಪತ್ರ ಸಂಖ್ಯೆ: ಇಡಿ 303 ಡಿಸಿಇ 2022 ದಿನಾಂಕ 06.01.2023 ರಲ್ಲಿ, ಪ್ರಾಧಿಕಾರವು ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ, ಕೆಳಕಂಡ ವಿಷಯಗಳಲ್ಲಿನ ಸಮಾನ ವಿದ್ಯಾರ್ಹತೆ ಬಗ್ಗೆ ಕೋರಲಾದ ಸ್ಪಷ್ಟೀಕರಣ ಸ್ವೀಕೃತವಾಗಿರುತ್ತದೆ. ಈ ಸಂಬಂಧ **ಫ್ಯಾಷನ್ ಟೆಕ್ನಾಲಜಿ ಮತ್ತು ಎಲೆಕ್ಟ್ರಾನಿಕ್ಸ್** ವಿಷಯಗಳಲ್ಲಿನ, ಮೂಲ ದಾಖಲೆಗಳ ಪರಿಶೀಲನೆಯಾಗದ ಅಭ್ಯರ್ಥಿಗಳು ದಿನಾಂಕ 12.01.2023 ಮತ್ತು 13.01.2023 ರಂದು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತೆ ತಿಳಿಸಿದೆ. **ಸೂಕ್ಷ್ಮ ಜೀವ ಶಾಸ್ತ್ರ** ವಿಷಯದಲ್ಲಿ ಕೋರಲಾದ ಸಮಾನ ವಿದ್ಯಾರ್ಹತೆಯನ್ನು ಪರಿಗಣಿಸಲು ಅವಕಾಶವಿಲ್ಲವೆಂದು ಸ್ಪಷ್ಟೀಕರಣದಲ್ಲಿ ತಿಳಿಸಿರುವುದರಿಂದ ಸೂಕ್ಷ್ಮ ಜೀವ ಶಾಸ್ತ್ರದ ವಿಷಯದಲ್ಲಿ ಸಮಾನ ವಿದ್ಯಾರ್ಹತೆಯಿಂದ ಪರಿಶೀಲನೆಯಾಗದ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರಿಶೀಲನೆಗೆ ಅವಕಾಶವಿರುವುದಿಲ್ಲ.

| ಕ್ರಮ ಸಂಖ್ಯೆ | ವಿಷಯ | Remarks |
|---|---|---|
| 1 | ಫ್ಯಾಷನ್ ಟೆಕ್ನಾಲಜಿ (Fashion Technology) | ಹಾಜರಾಗಬೇಕಿರುತ್ತದೆ |
| 2 | ಎಲೆಕ್ಟ್ರಾನಿಕ್ಸ್ (Electronics) | |
| 3 | ಸೂಕ್ಷ್ಮ ಜೀವ ಶಾಸ್ತ್ರ (Microbiology) | ಹಾಜರಾಗುವಂತಿಲ್ಲ |

ಪ್ರಾಧಿಕಾರವು ಪ್ರಕಟಿಸಲಾದ ಅಭ್ಯರ್ಥಿಗಳ ಪಟ್ಟಿಗಳಲ್ಲಿನ ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಗೈರು ಹಾಜರಾದ/ ಅಪೂರ್ಣಗೊಂಡ/ ಉರ್ದು ವಿಷಯದಲ್ಲಿ ಮೂಲ ದಾಖಲೆಗಳ ಪರಿಶೀಲನೆಯನ್ನು ಮುಂದೂಡಲಾಗಿದ್ದ ಅಭ್ಯರ್ಥಿಗಳು ದಿನಾಂಕ 12.01.2023 ಮತ್ತು 13.01.2023 ರಂದು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತೆ ತಿಳಿಸಿದೆ.

ಮುಂದುವರೆದು, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಗ್ರೂಪ್–ಸಿ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕ ನೇಮಕಾತಿಗೆ ಅರ್ಜಿ ಸಲ್ಲಿಸಿ ಗ್ರೂಪ್–ಸಿ ಮೀಸಲಾತಿ ನಮೂದಿಸಿರುವ ಎಲ್ಲಾ ಅಭ್ಯರ್ಥಿಗಳು ಮಾತ್ರ ದಿನಾಂಕ 12.01.2023 ಮತ್ತು 13.01.2023 ರಂದು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಲು ತಿಳಿಸಿದೆ.

**ಗಣಕ ವಿಜ್ಞಾನ** ವಿಷಯದ ಸಮಾನ ವಿದ್ಯಾರ್ಹತೆ ಬಗ್ಗೆ ಕೋರಲಾದ ಸ್ಪಷ್ಟೀಕರಣ ಇಂದಿನವರೆಗೆ ಸ್ವೀಕೃತವಾಗದ ಹಿನ್ನಲೆಯಲ್ಲಿ ಗಣಕ ವಿಜ್ಞಾನ ವಿಷಯದ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಶೀಲನೆ ವಿವರವನ್ನು ಪ್ರಾಧಿಕಾರದ ಅಂತರ್ಜಾಲದಲ್ಲಿ ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.

**ಸೂಚನೆ: ಈಗಾಗಲೇ ದಿನಾಂಕ 09.11.2022 ರಿಂದ 19.11.2022 ವರೆಗೆ ಮತ್ತು 19.12.2022 ಮತ್ತು 20.12.2022 ರಂದು ನಡೆಸಲಾದ ಪರಿಶೀಲನಾ ಕಾರ್ಯದಲ್ಲಿ ಒಂದು ವಿಷಯದಲ್ಲಿ ಅರ್ಹಗೊಂಡು ಮೂಲ ದಾಖಲೆಗಳ ಪರಿಶೀಲನೆಯು ಪೂರ್ಣಗೊಂಡಿರುವ/ತಿರಸ್ಕೃತಗೊಂಡಿರುವ ಅಭ್ಯರ್ಥಿಗಳು ಮತ್ತೊಮ್ಮೆ ಅದೇ ವಿಷಯಕ್ಕೆ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತಿಲ್ಲ.**

❖ **ಮೂಲ ದಾಖಲೆಗಳ ಪರಿಶೀಲನೆ ಸಂಬಂಧ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಮಾಹಿತಿ ಕಳುಹಿಸಲಾಗುವುದಿಲ್ಲ.**

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in